ಕರ್ನಾಟಕ ವಿಧಾನಸಭೆ

ಸೋಮವಾರ 11ನೇ ಜನವರಿ 1993

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು:- ರಾಜ್ಯದ ಮಾಜಿ ಮುಖ್ಯ ಅಭಿಯಂತರರೂ, ಸರ್ಕಾರದ ವಿಶೇಷ ಕಾರ್ಯದರ್ಶಿಗಳೂ, ಖ್ಯಾತ ನೀರಾವರಿ ತಜ್ಞರೂ ಆಗಿದ್ದ ಶ್ರೀ ಬಾಳೆಕುಂದರಗಿಯವರು ಜನವರಿ 7ರಂದು ನಗರದಲ್ಲಿ ರಸ್ತೆ ಅಪಘಾತದಲ್ಲಿ ನಿಧನರಾದ ಸುದ್ದಿಯನ್ನು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತ ಬಾಳೆಕುಂದರಗಿಯವರು ಆಳವಾದ ತಾಂತ್ರಿಕ ಜ್ಞಾನ ಹಾಗೂ ಅಸಾಧಾರಣ ಸಾಮರ್ಥ್ಯಕ್ಕೆ ಹೆಸರಾಗಿದ್ದವರು. ನಿವೃತ್ತರಾದ ಮೇಲೂ ರಾಜ್ಯಕ್ಕೆ ಕಾವೇರಿ ಹಾಗೂ ಕೃಷ್ಣ ನದಿಗಳ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಾ ರಾಜ್ಯದ ಪರ ಸಮರ್ಥವಾದ ಮಂಡಿಸುತ್ತಲೇ ಆಕಸ್ಮಿಕ ಮರಣಕ್ಕೀಡಾದದ್ದು ರಾಜ್ಯದ ದುರಾದೃಷ್ಟ. ಈ ವಿಯೋಗದಿಂದಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಪರಮಾತ್ಮ ನೀಡಲೆಂದು ಈ ಸದನ ಪ್ರಾರ್ಥಿಸುತ್ತದೆ.

(ಮೃತರ ಗೌರವಾರ್ಥ ಸದಸ್ಯರು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೋರುತ್ತೇನೆ.)

(ಸಭೆಯು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು:- ಈ ಸದನ ಅಂಗೀಕರಿಸಿದ ನಿರ್ಣಯವನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ರಾಜ್ಯಕ್ಕೆ ರೈಲ್ವೆನಲ್ಲಿ ಆಗಿರುವ ಅನ್ಯಾಯ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ ತಮಗೆ ನಾನು ಒಂದು ಪತ್ರವನ್ನು ರಾಜ್ಯಕ್ಕೆ ರೈಲ್ವೆಯಲ್ಲಿ ಆಗಿರತಕ್ಕ ಅನ್ಯಾಯದ ಬಗ್ಗೆ ಕೊಟ್ಟಿದ್ದೇನೆ. ಕೇಂದ್ರದಲ್ಲಿ ಮುಂದಿನ ತಿಂಗಳು ರೈಲ್ವೆ ಬಜೆಟನ್ನು ಮಂಡಿಸಲಿದ್ದಾರೆ. ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ರೈಲ್ವೆಯಲ್ಲಿ ಆಗಿರತಕ್ಕ ಅನ್ಯಾಯದ ಬಗ್ಗೆ ನಾವು ಇಲ್ಲಿ ಪ್ರಾಮಾಣಿಕವಾಗಿ ಒತ್ತಾಯವನ್ನು ತರಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಪಕ್ಷಾತೀತವಾಗಿ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗಿದೆ.

ಅಧ್ಯಕ್ಷರು:- ನಮ್ಮ ಸಂಸತ್ ಸದಸ್ಯರು ಇದ್ದಾರೆ ಅವರು ಅಲ್ಲಿ ಒತ್ತಡತರುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸಂಸತ್ ಸದಸ್ಯರು ಏನೂ ಮಾಡುತ್ತಾ ಇಲ್ಲ.

ಅಧ್ಯಕ್ಷರು:- ದಯವಿಟ್ಟು ತಾವು ಅವರ ಮೇಲೆ ಪರೋಕ್ಷವಾಗಿ ಆರೋಪ ಮಾಡಬೇಡಿ. ಆ ರೀತಿ ಸಾರಾಸಗಟು ಸಂಸತ್ ಸದಸ್ಯರು ಏನೂ ಮಾಡುತ್ತಾ ಇಲ್ಲ ಎಂದು ಹೇಳಬೇಡಿ.

ಶ್ರೀ ವಾಟಾಳ್ ನಾಗರಾಜ್:- ಸಾರಾಸಗಟು ಅಲ್ಲ ಅಲ್ಪ ಸ್ವಲ್ಪ